**1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ**

**MVC** – 255/2026 **PW**–1

**ದಿಃ24.07.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆಃ ಅರ್ಜಿದಾರ ಪರ ವಕೀಲರಾದ ಶ್ರೀ ಎಸ.ಕೆ.ಪಿ ರವರಿಂದಃ**

ನಾನು ಈ ಅರ್ಜಿಯಲ್ಲಿ ಅರ್ಜಿದಾರನಾಗಿದ್ದು, ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಈ ದಿನ ನ್ಯಾಯಾಲಯದ ಮುಂದೆ ಸಲ್ಲಿಸುತ್ತಿದ್ದು, ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತವೆ. ಅದರಲ್ಲಿರುವ ಸಹಿ ನನ್ನದು.

ನಾನು ನನ್ನ ಅರ್ಜಿಗೆ ಸಂಬಂಧಿಸಿದಂತೆ ದೂರಿನ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಸದರಿ ದಾಖಲೆಯನ್ನು ನಿಶಾನೆ ಪಿ 1 ಎಂದು, ಎಫಐಆರನ ದೃಢೀಕೃತ ನಕಲನ್ನು ನಿಶಾನೆ ಪಿ 2 ಎಂದು, ಸ್ಥಳ ಪಂಚನಾಮೆಯ ದೃಢೀಕೃತ ನಕಲನ್ನು ನಿಶಾನೆ ಪಿ 3 ಎಂದು, ಎರಡು ವಾಹನ ಅಮಾನತ್ತು ಪಂಚನಾಮೆಯ ದೃಢೀಕೃತ ನಕಲಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಶಾನೆ ಪಿ 4 ಮತ್ತು ನಿಶಾನೆ ಪಿ 5 ಎಂದು,ಗಾಯದ ಪ್ರಮಾಣ ಪತ್ರದ ದೃಢೀಕೃತ ನಕಲನ್ನು ನಿಶಾನೆ ಪಿ 6 ಎಂದು, ಐಎಂವಿ ವರದಿಯ ದೃಢೀಕೃತ ನಕಲನ್ನು ನಿಶಾನೆ ಪಿ 7 ಎಂದು, ಅಂತಿಮ ವರದಿಯ ದೃಢೀಕೃತ ನಕಲನ್ನು ನಿಶಾನೆ ಪಿ 8 ಎಂದು, ಡಿಸಚಾರ್ಜ ಸಮರಿ, Out patient ರೆಕಾರ್ಡಗಳನ್ನು ಹಾಗೂ ಒಂದು ಎಕ್ಸರೆಯನ್ನು ಒಟ್ಟಾಗಿ ನಿಶಾನೆ 9 ಎಂದು ಗುರ್ತಿಸಲಾಯಿತು.

(ಈ ಹಂತದಲ್ಲಿ ಎದುರುದಾರು ಪರ ವಕೀರನ್ನು ಕೂಗಿ ಕರೆಯಿಸಲಾಯಿತು, ಗೈರು ಹಾಜರಿದ್ದು ಅವರು ಲಿಖಿತ ತಕರಾರು ಸಲ್ಲಿಸದೆ ಇರುವ ಕಾರಣ ಪಾಟೀ ಸವಾಲು ಇಲ್ಲವೆಂದು ತೆಗೆದುಕೊಳ್ಳಲಾಯಿತು.)

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

1 ನೇ ಅಧಿಕ ಹಿ.ದಿ.ನ್ಯಾಹುಬ್ಬಳ್ಳಿ